**ಸಾಕ್ಷಿಗೆ ದಿನಾಂಕಃ 24.02.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್.ಬಿ. ವಕೀಲರಿಂದಃ**

ವಾದಿಯು ಸರ್ವೆ ನಂ.315/2 ಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸರ್ವೆ ನಂ.315 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ವಾದಿಯ ತಂದೆ ನಂಜೇಗೌಡ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ವಾದಿ ಒಂದೇ ಗ್ರಾಮದವರು ಎಂದರೆ ಸರಿ. ವಾದಿಯು ಈ ದಾವೆಯನ್ನು ಸರ್ವೆ ನಂ.315/6 ರಲ್ಲಿ 30 ಗುಂಟೆಗೆ ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನಿ.ಪಿ.1 ರ ಪ್ರಕಾರ ದಾವಾ ಸ್ವತ್ತಿನ ಖಾತೆ 1980-81 ರಲ್ಲಿ ನಂಜುಂಡೇಗೌಡ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 1980 ರಿಂದ 2011 ರವರೆಗೆ ದಾವಾ ಸ್ವತ್ತಿನ ಖಾತೆ ನಂಜುಂಡೇಗೌಡರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಂತರ ನಂಜುಂಡೇಗೌಡರ ಹೆಂಡತಿ ಮರಮ್ಮ ನವರ ಹೆಸರಿಗೆ ದಾನ ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 2011 ರಿಂದ 2023 ರವರೆಗೆ ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ದಾವಾ ಸ್ವತ್ತು ನಮಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. 2023 ರಲ್ಲಿ ದಾವಾ ಸ್ವತ್ತಿನ ಖಾತೆ ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2023 ರ ತನಕ ದಾವಾ ಸ್ವತ್ತಿನ ಖಾತೆ ಮತ್ತು ಸ್ವಾಧೀನ ವಾದಿಯ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.1 ರಿಂದ 55 ದಾಖಲೆಗಳು ನಮ್ಮ ಜಮೀನಿಗೆ ಸಂಬಂಧಿಸಿದ್ದು ವಾದಿಯ ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**